# ಪ್ರಧಾನ ವ್ಯವಹಾರ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಹೊಸನಗರ

ಸಿ.ಸಿ. ನಂ. 400/2019

ಫಿರ್ಯಾದುದಾರರುಃ ಹೊಸನಗರ ಪೊಲೀಸ್ ಠಾಣೆ

ವಿರುದ್ಧ

ಆರೋಪಿಗಳುಃ ಶಶಿಕುಮಾರ್ ಮತ್ತು ಇತರರು.

## ದೋಷಾರೋಪಣೆ

ಶ್ರೀ ರವಿಕುಮಾರ, ಕೆ ಬಿ.ಎ.ಎಲ್., ಎಲ್.ಎಲ್.ಬಿ., ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಹೊಸನಗರ ಆದ ನಾನು ಈ ಕೆಳಕಂಡ ಆರೋಪಿತರಾದ,

ಆ–1 ಶಶಿಕುಮಾರ ಬಿನ್ ರವಿ,
ವಯಸ್ಸು ಸುಮಾರು 25 ವರ್ಷ,
ಉದ್ಯೋಗಃ ಕೂಲಿ,
ವಾಸಃ ಮುಳುಗುಡ್ಡೆ ಗ್ರಾಮ,
ಹೊಸನಗರ ತಾಲ್ಲೂಕು.

ಆ–2 ಶ್ರೀಮತಿ ಶಾರದ ಕೋಂ ರವಿ,
ವಯಸ್ಸು ಸುಮಾರು 45 ವರ್ಷ,
ಉದ್ಯೋಗಃ ಕೂಲಿ,
ವಾಸಃ ಮುಳುಗುಡ್ಡೆ ಗ್ರಾಮ,
ಹೊಸನಗರ ತಾಲ್ಲೂಕು.

ಆ–3 ರವಿ ಬಿನ್ ಜಟ್ಟು,
ವಯಸ್ಸು ಸುಮಾರು 48 ವರ್ಷ,
ಉದ್ಯೋಗಃ ಕೂಲಿ,
ವಾಸಃ ಮುಳುಗುಡ್ಡೆ ಗ್ರಾಮ,
ಹೊಸನಗರ ತಾಲ್ಲೂಕು.

ಆ–4 ಸುನೀಲ್ ಕುಮಾರ್ ಬಿನ್ ರವಿ,
ವಯಸ್ಸು ಸುಮಾರು 23 ವರ್ಷ,
ಉದ್ಯೋಗಃ ಕೂಲಿ,

ವಾಸಃ ಮುಳುಗುಡ್ಡೆ ಗ್ರಾಮ,
ಹೊಸನಗರ ತಾಲ್ಲೂಕು.

ಆ–5 ಅಶ್ವಿನಿ ಬಿನ್ ಬಾಲಚಂದ್ರ,
ವಯಸ್ಸು ಸುಮಾರು 23 ವರ್ಷ,
ಉದ್ಯೋಗಃ ಗೃಹಿಣಿ,
ವಾಸಃ ಹಿರೆಮನೆ, ಮಂಜುಗಳಲೆ, ಮುಳುಗುಡ್ಡೆ ಗ್ರಾಮ,
ಹೊಸನಗರ ತಾಲ್ಲೂಕು.

ನಿಮ್ಮ ಮೇಲೆ ಹೊರಿಸಿರುವ ಆರೋಪಣೆ ಏನೇಂದರೆಃ–

ಫಿರ್ಯಾದುದಾರರಾದ ಪ್ರತೀಮಾ ಮತ್ತು 1 ನೇ ಆರೋಪಿಯಾದ ಶಶಿಕುಮಾರ್ ನೀವು ದಂಪತಿಗಳಾಗಿದ್ದು, ದಿನಾಂಕ 01.03.2015 ರಂದು ನಿಮ್ಮ ವಿವಾಹವಾಗಿದ್ದು, ಮದುವೆಯಾದಗಿನಿಂದಲೂ 1 ರಿಂದ 4 ನೇ ಆರೋಪಿತರಾದ ಶಶಿಕುಮಾರ, ಶಾರದ, ರವಿ ಸುನೀಲ್ ಕುಮಾರ್ ರವರು ಚಾಸಾ–1 ಪ್ರತೀಮಾ ರವರಿಗೆ ಸಣ್ಣ ಪುಟ್ಟ ವಿಚಾರಗಳಿಗೆ ಜಗಳ ತೆಗೆದು ಅವಾಚ್ಯವಾಗಿ ಬೈದು, ತವರು ಮನೆಯಿಂದ 2 ಲಕ್ಷ ವರದಕ್ಷಿಣೆ ತರುವಂತೆ ಚಾಸಾ–1 ಪ್ರತೀಮಾ ರವರಿಗೆ ದೈಹಿಕವಾಗಿ ಹಾಗೂ ಮಾನಸಿಕವಾಗಿ ಹಿಂಸೆ ನೀಡಿದ್ದು, ಆ ಮೂಲಕ ಭಾರತ ದಂಡ ಸಂಹಿತೆ ಕಲಂ 498 ಎ ಸಹಕಲಂ 149 ರ ರಡಿಯಲ್ಲಿ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಮಾಡಿರುತ್ತೀರಿ ಎಂದು ನಿಮ್ಮ ಮೇಲೆ ಆರೋಪಣೆಯನ್ನು ಇಟ್ಟಿರುತ್ತೇನೆ.

ದಿನಾಂಕ 17.05.2017 ರಂದು ರಾತ್ರಿ 10.00 ಗಂಟೆಗೆ ಹೊಸನಗರ ಟೌನ್ ಮಾರಗುಡ್ಡದಲ್ಲಿರುವ ಮಾರಿಕಾಂಬ ದೇವಸ್ಥಾನದ ಬಳಿ 1 ರಿಂದ 5 ನೇ ಆರೋಪಿತರಾದ ಶಶಿಕುಮಾರ, ಶಾರದ, ರವಿ, ಸುನೀಲ್ ಕುಮಾರ್ ಹಾಗೂ ಅಶ್ವಿನಿ ನೀವು ಏಕೋದ್ದೇಶ ಹೊಂದಿದವರಾಗಿ, ಚಾಸಾ–1 ಪ್ರತೀಮಾ ರವರನ್ನು ಅಡ್ಡಗಟ್ಟಿ ತಡೆದು ನಿಗ್ರಹಿಸಿದ್ದು, ಆ ಮೂಲಕ ಭಾರತ ದಂಡ ಸಂಹಿತೆ ಕಲಂ 341 ಸಹಕಲಂ 149 ರ ರಡಿಯಲ್ಲಿ ಅಪರಾಧವನ್ನು

ಈ ನ್ಯಾಯಾಲಯದ ಸಂಜ್ಞಾನದಲ್ಲಿ ಮಾಡಿರುತ್ತೀರಿ ಎಂದು ನಿಮ್ಮ ಮೇಲೆ ಆರೋಪಣೆಯನ್ನು ಇಟ್ಟಿರುತ್ತೇನೆ.

ಅದೇ ದಿನ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವು ಏಕೋದ್ದೇಶ ಹೊಂದಿದವರಾಗಿ, 2 ಮತ್ತು 5 ನೇ ಆರೋಪಿಯಾದ ಶಾರದ ಮತ್ತು ಅಶ್ವಿನಿ ರವರು ಚಾಸಾ-1 ಪ್ರತೀಮಾ ರವರಿಗೆ ಮುಂಡೆ, ರಂಡೆ ಎಂದು ಅವಾಚ್ಯವಾಗಿ ಬೈದು ನಿಂದಿಸಿದ್ದು, ಆ ಮೂಲಕ ಭಾರತ ದಂಡ ಸಂಹಿತೆ ಕಲಂ 504 ಸಹಕಲಂ 149 ರ ರಡಿಯಲ್ಲಿ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಮಾಡಿರುತ್ತೀರಿ ಎಂದು ನಿಮ್ಮ ಮೇಲೆ ಆರೋಪಣೆಯನ್ನು ಇಟ್ಟಿರುತ್ತೇನೆ.

ಅದೇ ದಿನ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವು ಏಕೋದ್ದೇಶ ಹೊಂದಿದವರಾಗಿ 1, 3, 4 ಮತ್ತು 5 ನೇ ಆರೋಪಿತರಾದ ಶಶಿಕುಮಾರ, ರವಿ, ಸುನೀಲ್ ಕುಮಾರ್ ಹಾಗೂ ಅಶ್ವಿನಿ ರವರು ಚಾಸಾ-1 ಪ್ರತೀಮಾ ರವರಿಗೆ ಕೈಗಳಿಂದ ಕೆನ್ನೆಗೆ, ಬೆನ್ನಿಗೆ ಹೊಡೆದು, ಎದೆ ಮೇಲೆ ಗುದ್ದಿದ್ದು, 1 ನೇ ಆರೋಪಿಯಾದ ಶಶಿಕುಮಾರ ನೀವು ಹೊಟ್ಟೆಗೆ ಒದ್ದು ಸಾಮಾನ್ಯ ಸ್ವರೂಪದ ನೋವನ್ನುಂಟು ಮಾಡಿದ್ದು, ಆ ಮೂಲಕ ಭಾರತ ದಂಡ ಸಂಹಿತೆ ಕಲಂ 323 ಸಹಕಲಂ 149 ರ ರಡಿಯಲ್ಲಿ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಮಾಡಿರುತ್ತೀರಿ ಎಂದು ನಿಮ್ಮ ಮೇಲೆ ಆರೋಪಣೆಯನ್ನು ಇಟ್ಟಿರುತ್ತೇನೆ.

ಅದೇ ದಿನ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವು ಏಕೋದ್ದೇಶ ಹೊಂದಿದವರಾಗಿ 1 ನೇ ಆರೋಪಿಯಾದ ಶಶಿಕುಮಾರ ರವರು ಚಾಸಾ-1 ಪ್ರತೀಮಾ ರವರಿಗೆ ನಿನ್ನನ್ನು ಕತ್ತು ಹಿಸುಕಿ ಸಾಯಿಸುತ್ತೇನೆಂದು ಜೀವ ಬೆದರಿಕೆ ಹಾಕಿದ್ದು, ಆ ಮೂಲಕ ಭಾರತ ದಂಡ ಸಂಹಿತೆ ಕಲಂ 506 ಸಹಕಲಂ 149 ರ ರಡಿಯಲ್ಲಿ ಅಪರಾಧವನ್ನು ಈ

ಶಶಿಕುಮಾರ

ನ್ಯಾಯಾಲಯದ ಸಂಜ್ಞಾನದಲ್ಲಿ ಮಾಡಿರುತ್ತೀರಿ ಎಂದು ನಿಮ್ಮ ಮೇಲೆ ಆರೋಪಣೆಯನ್ನು ಇಟ್ಟಿರುತ್ತೇನೆ.

ಅದೇ ದಿನ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವು ಏಕೋದ್ದೇಶ ಹೊಂದಿದವರಾಗಿ, ಆ ಪೈಕಿ 1 ನೇ ಆರೋಪಿಯಾದ ಶಶಿಕುಮಾರ್ ನೀವು ನಿಮ್ಮ ಪತ್ನಿಯಾದ ಚಾಸಾ–1 ಪ್ರತೀಮಾ ರವರು ಜೀವಂತ ಇರುವಾಗಲೇ ವಿಚ್ಛೇದನೆ ನೀಡದೇ 5 ನೇ ಆರೋಪಿಯಾದ ಅಶ್ವಿನಿ ರವರನ್ನು ಮದುವೆಯಾಗಿದ್ದು, ಆ ಮೂಲಕ ಭಾರತ ದಂಡ ಸಂಹಿತೆ ಕಲಂ 494 ಸಹಕಲಂ 149 ರ ರಡಿಯಲ್ಲಿ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಮಾಡಿರುತ್ತೀರಿ ಎಂದು ನಿಮ್ಮ ಮೇಲೆ ಆರೋಪಣೆಯನ್ನು ಇಟ್ಟಿರುತ್ತೇನೆ.

ಸದರಿ ಅಪರಾಧಗಳು ಈ ನ್ಯಾಯಾಲಯದ ವಿಚಾರಣಾ ವ್ಯಾಪ್ತಿಗೆ ಬರುವುದರಿಂದ ನೀವು ವಿಚಾರಣೆಗೆ ಹಾಜರಾಗಲು ನಿರ್ದೇಶಿಸುತ್ತೇನೆ.

ಆರೋಪಿತರಿಗೆ ದಿನಾಂಕ 05.05.2022 ರಂದು ಅವರು ತಿಳಿದ ಭಾಷೆಯಾದ ಕನ್ನಡದಲ್ಲಿ ಓದಿ, ವಿವರಿಸಿ, ಅರ್ಥೈಸಿ, ತೆರೆದ ನ್ಯಾಯಾಲಯದಲ್ಲಿ ಹೇಳಲಾಯಿತು.

(ರವಿಕುಮಾರ್ ಕೆ.)
ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಹೊಸನಗರ

ಶಶಿಕುಮಾರ